ಪಂಚಮ

ಸಂಪುಟ : 11 ಸಂಚಿಕೆ : 1-2 ಜನವರಿ 1987 ಬೆಲೆ : 1-00

ಸರಿದ ವರ್ಷ : ನೋವಿನ ನೆನಪು....

ಅಸಮಾನತೆ, ತಾರತಮ್ಯತೆಗಳ ನೊಗದಡಿ ಸಿಕ್ಕಿಬಿದ್ದವರಿಗೆ ಪ್ರತಿ ವರ್ಷವೂ ಕರಾಳ, ದುಃಸ್ವಪ್ನದಾಯಕ. ಉರುಳುವ ದಿನಗಳಾಗಲಿ, ಸರಿದು ಹೋಗುವ ಕಾಲವಾಗಲಿ ನೆಮ್ಮದಿಯ ಸೆರಗು ಹೊದಿಸಲಾರವು. ಉಳ್ಳವರ ದೌರ್ಜನ್ಯ ದಮನಗಳೇ ನಿತ್ಯ ದಿನಚರಿಯಾದ ದಲಿತರ ಬದುಕಿಗೆ ತಂಪೆರೆಯಲಾಗದ ಹೊಸತು ಹಳತಿಗಿಂತ ಘೋರ. ಕಳೆದು ಹೋದ 86 ರತ್ತ ಒಂದು ಹಿನ್ನೋಟ........

1986 ಎಂದಿನಂತೆ ದಲಿತರಿಗೆ ಕರಾಳ ವರ್ಷ, ಕೊಲೆ ಸುಲಿಗೆ ಅತ್ಯಾಚಾರಗಳಂತಹ ಕ್ರೌರ್ಯ ದೇಶದ ಎಲ್ಲಡೆ ವಿಶೇಷವಾಗಿ ಬಿಹಾರ, ಉತ್ತರಪ್ರದೇಶ ಮತ್ತು ಮಧ್ಯ ಪ್ರದೇಶಗಳಂತಹ ಊಳಿಗಮಾನ್ಯ ವ್ಯವಸ್ಥೆಯ ರಾಜ್ಯಗಳಲ್ಲಿ ನಡೆದಿದೆ.

ತಮಿಳುನಾಡಿನ ಕಿಲ್ವಮಣಿ, ಬಿಹಾರದ ಬೆಲ್ಚಿ, ಪಿಪ್ರಾ, ಪಾರಸ್ ಬಿಘಾ, ಗುಹಾ, ಬಂಜಿ, ಆಂಧ್ರದ ಕಾರಂಚೇಡು, ಚಿರಾಲದಂತಹ ದಲಿತರ ಹತ್ಯಾಕಾಂಡಗಳ ಕರಾಳ ದಿನಗಳು ಮನಸ್ಸಿನಿಂದ ಇನ್ನೂ ಮಾಸದೇ ಇರುವಾಗಲೇ ಬಿಹಾರದ ಕನ್ಸಾರಾ, ಅರವಾಲ್ ಗ್ರಾಮಗಳಲ್ಲಿ 1986ರ ಜುಲೈ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ದಲಿತರ ಕಗ್ಗೊಲೆಗಳು ನಡೆದವು.

ಏಪ್ರಿಲ್ 19 ಮಜ್ದೂರ್ ಕಿಸಾನ್ ಸಂಗ್ರಾಮ ಸಮಿತಿಯ ನೇತೃತ್ವದಲ್ಲಿ ಅರವಾಲ್ ಗ್ರಾಮದ ನೂರಾರು ಭೂಹೀನ ದಲಿತರು ಹತ್ತಾರು ವರ್ಷಗಳಿಂದ ಗುಡಿಸಲು ಹಾಕಿಕೊಂಡು ಬದುಕುತ್ತಿದ್ದ ಜಾಗವನ್ನು ಶ್ರೀಮಂತ ಭೂಮಾಲೀಕನೊಬ್ಬನಿಗೆ ಸರ್ಕಾರ ಮಂಜೂರು ಮಾಡಿದನ್ನು ಪ್ರತಿಭಟಿಸುತ್ತಿದ್ದರು.

ಭೂಮಾಲೀಕರ ಚೇಲರಂತೆ ವರ್ತಿಸುವ ಪೊಲೀಸರು ನ್ಯಾಯಕ್ಕಾಗಿ ಒತ್ತಾಯಿಸಲು ಸೇರಿದ್ದ ನೂರಾರು ಮಂದಿ ಅಮಾಯಕ ಬಡಜೀವಗಳ ಮೇಲೆ ಗುಂಡಿನ ಮಳೆಗರೆದರು. ಸ್ಥಳದಲ್ಲೇ 23 ಜನರ ಹೆಣಗಳು ಉರುಳಿದವು. ಜಲಿಯನ್ ವಾಲಾಬಾಗ್ ದುರಂತವನ್ನು ನೆನಪಿಗೆ ತಂದುಕೊಡುವ ಈ ಘೋರ ಕೃತ್ಯದ ಬಗೆಗೆ ಬಿಹಾರ ಅಥವಾ ಕೇಂದ್ರ ಸರ್ಕಾರವಾಗಲಿ ಚಕಾರವೆತ್ತಲಿಲ್ಲ.

ಕನ್ಸಾರ, ಬಿಹಾರದ ಘೋರ ಕೃತ್ಯಗಳಲ್ಲಿ ದಾಖಲಾದ ಮತ್ತೊಂದು ಹಳ್ಳಿ. ಈ ಭಾಗದ ಬಲಿಷ್ಠ ಭೂಸ್ವಾಮಿ ವಿಜಯಸಿಂಗ್ ಹಲವಾರು ಹತ್ಯೆ, ಹೆಣ್ಣು ಮಕ್ಕಳ ಅತ್ಯಾಚಾರದಂತಹ ಹೇಯ ಕೃತ್ಯಗಳಿಗಾಗಿ ಜುಲೈ 8ರಂದು ಕೊಲೆಗೀಡಾದ. ಈ ಕೊಲೆ ನಡೆದ ಒಂದು ಗಂಟೆ ಒಳಗಾಗಿಯೇ ಕಹರ್ ಎಂಬ ಹಿಂದುಳಿದ ಜಾತಿಯ ಆರು ಜನ ಅಸಹಾಯಕ ಮಹಿಳೆಯರು, ಇಬ್ಬರು ಎಳೆಯ ಬಾಲಕರು ಮತ್ತು ಇಬ್ಬರು ವೃದ್ಧರನ್ನು ಭೂಮಿಹಾರ ಭೂಮಾಲೀಕರು ಮನೆಗಳಿಗೆ ನುಗ್ಗಿ ಗುಂಡಿಟ್ಟು ಕೊಂದರು.

(8ನೇ ಪುಟಕ್ಕೆ)

ಪಂಚಾಯತ್ ರಾಜ್ :

ಹಳ್ಳಿಗಳಿಗೆ ಪಾಷಾಣ ಬೇರುಗಳಿಗೆ ಕೊಡಲಿ

ಭಾರತದ ಗ್ರಾಮೀಣ ಸ್ಥಿತಿಯು ತಲೆ ಎತ್ತುವ ದಲಿತನ ತಲೆಯನ್ನೇ ಬಲಿ ತೆಗೆದುಕೊಳ್ಳುವಷ್ಟು ಕ್ರೂರ. ಈಗಾಗಲೇ ಬಲಾಢ್ಯ ಜಾತಿಗಳ ಕೈಯಲ್ಲಿರುವ ಗ್ರಾಮಕ್ಕೆ ಹೆಚ್ಚಿನ ಅಧಿಕಾರ ಬಂದರೆ ದಲಿತರನ್ನು ಹಿಂದುಳಿದವರನ್ನು ಮತ್ತು ಅಲ್ಪಸಂಖ್ಯಾತರನ್ನು ಸಾವಿನ ದವಡೆಗೆ ನೂಕಿದಂತಾಗುತ್ತದೆ. ದಲಿತರ ಕಲ್ಯಾಣ ಕನಸಾಗುತ್ತದೆ.

ಮಸೂದೆಯಲ್ಲೇ ದಲಿತರು, ಹಿಂದುಳಿದವರು, ಅಲ್ಪ ಸಂಖ್ಯಾತರ ರಕ್ಷಣೆ ಮತ್ತು ಕಲ್ಯಾಣ ಅನಿವಾರ್ಯ. ಇಲ್ಲವಾದರೆ ಮೊದಲೇ ಅವಮಾನದಲ್ಲಿ ಬೇಯುತ್ತಿರುವ ದಲಿತರ ಕೊರಳಿಗೆ ಸಾವಿನ ಗಂಟು ಹಾಕಿದಂತಾಗುತ್ತದೆ. ಇಲ್ಲವಾದರೆ ನಾವು ಈ ಮಸೂದೆಯನ್ನೇ ವಿರೋಧಿಸುತ್ತೇವೆ. ದುರ್ಬಲರ ಉಳುವಿಗೆ ಈ ವಿರೋಧ ಅತ್ಯಗತ್ಯ.

–ಇದು 24, ಜುಲೈ–1983 ರಂದು ಶ್ರೀರಂಗಪಟ್ಟಣದಲ್ಲಿ ಜಿಲ್ಲಾ ಮತ್ತು ಪಂಚಾಯ್ತಿ ಮಸೂದೆಯ ಚರ್ಚೆಗಾಗಿ ಸೇರಿದ ದ.ಸಂ.ಸ. ಚಿಂತಕರ ಸಭೆ ವ್ಯಕ್ತಪಡಿಸಿದ ಅಭಿಪ್ರಾಯ.

ಇದಾಗಿ ಮೂರು ವರ್ಷಗಳು ಕಳೆದವು. ಜನತಾ ಸರ್ಕಾರ ದುರ್ಬಲರ ರಕ್ಷಣೆ ಮತ್ತು ಕಲ್ಯಾಣಕ್ಕೆ ಮಸೂದೆಯಲ್ಲೇ ಪರಿಹಾಕ್ಕೆ ಪ್ರಯತ್ನಿಸಲಿಲ್ಲ.

ಮೇಲ್ಜಾತಿ ಬಲಾಢ್ಯರ ಪ್ರಾಬಲ್ಯವೇ ಉಸಿರಾದ ಜನತಾ ಪಕ್ಷಕ್ಕೆ ಇದು ಬೇಕಾಗಿಯೂ ಇರಲಿಲ್ಲ. ಅಂತೂ ಜನತಾ ಆಶಯವಾದ ಜಿಲ್ಲಾ ಪರಿಷತ್ ಮತ್ತು ಮಂಡಲ್ ಪಚಾಂಯ್ತಿ ಚುನಾವಣೆಗಳು ಮುಗಿದಿವೆ.

ಜನತಾದ ಈ ಕನಸು ದಿಕ್ಕಿಲ್ಲದ ಗ್ರಾಮೀಣ ಗರೀಬರಿಗೆ ಒಂದು ದುಃಸ್ವಪ್ನ ಮಾತ್ರ ಎಂಬುದು ಚುನಾವಣೆ ನಡೆದ ರೀತಿಯಿಂದಲೇ ವ್ಯಕ್ತವಾಗಿದೆ. ಈ ನಾಡು ಎಂದೂ ಕಾಣದಷ್ಟು ಕಪ್ಪು ಹಣ, ಹೆಂಡದ ಹೊಳೆ ಹರಿದಿದೆ. ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ತೋಳ್ಬಲ ಚುನಾವಣೆಯನ್ನು ಅನೈತಿಕತೆಯ ಪಾತಾಳಕ್ಕೊಯ್ದಿವೆ.

(6ನೇ ಪುಟಕ್ಕೆ)

ರಾಜ್ಯದ ನಿಸ್ಸಹಾಯಕ ಹೆಣ್ಣುಮಕ್ಕಳಿಗೆ "ಅರಿಶಿನ-ಕುಂಕುಮ"ದ ಕೊಡುಗೆ

ದೇವದಾಸಿ ಪದ್ಧತಿಯ ನಿರ್ಮೂಲನ ಹಾಗೂ ಅವರ ಪುನರುದ್ಧಾರ

ತಲೆ ತಲಾಂತರದಿಂದ ಬಂದಿದ್ದ ದೇವದಾಸಿ ಪದ್ಧತಿಯಂಥ ಹೀನ ಸಂಪ್ರದಾಯದ ಸಾಮಾಜಿಕ ಪಿಡುಗನ್ನು ತೊಡೆದು ಹಾಕಲೆಂದು ಕರ್ನಾಟಕ ದೇವದಾಸೀ (ಸಮರ್ಪಣಾ ನಿಷೇಧ) ಕಾನೂನನ್ನು ಜಾರಿಗೊಳಿಸಲಾಗಿದೆ.

ಯಾವ ಸ್ತ್ರೀಯನ್ನೂ ದೇವರು, ದೇವಾಲಯ ಅಥವಾ ಧಾರ್ಮಿಕ ಸಂಸ್ಥೆಯ ಹೆಸರಿನಲ್ಲಿ ಸಮರ್ಪಿಸುವುದನ್ನು ಈ ಕಾನೂನು ನಿಷೇಧಿಸುತ್ತದೆ, ಅಲ್ಲದೆ ಅಂತಹ ಅಪರಾಧಗಳ ಶೋಧನೆ, ವಿಮುಕ್ತಿಗೊಂಡ ಮಹಿಳೆಯರ ಪಾಲನೆ, ರಕ್ಷಣೆ, ಆಕೆಯ ಕಲ್ಯಾಣ ಹಾಗೂ ಪುನರುದ್ಧಾರಕ್ಕೂ ಈ ಕಾನೂನು ಅನುವುಮಾಡಿಕೊಡುತ್ತದೆ. ಈ ಕಾನೂನಿನ ಉಲ್ಲಂಘನೆಯ ಅಪರಾಧಗಳಿಗೆ ರೂ. 2000 ದಿಂದ 5000 ರೂ.ಗಳವರೆಗೆ ಜುಲ್ಮಾನೆ ವಿಧಿಸಬಹುದಾಗಿದೆ.

ಹೀಗೆ ವಿಮುಕ್ತಿಗೊಂಡ ಮಹಿಳೆಯ ವಿವಾಹ ಆಕೆಯ ಪುನರುದ್ಧಾರದ ಶ್ರೇಷ್ಠ ಮಾರ್ಗ. ಇಂತಹ ಮದುವೆಗಳಿಗೆ ಉತ್ತೇಜನ ನೀಡುವ ಸಲುವಾಗಿ ರಾಜ್ಯ ಸರ್ಕಾರ ಈ ದಂಪತಿಗಳಿಗೆ 3000–00 ರೂ.ಗಳ ಪ್ರೋತ್ಸಾಹ ಧನವನ್ನು ನೀಡುತ್ತದೆ. ಈ ಪ್ರೋತ್ಸಾಹ ಧನವನ್ನು ಪಡೆಯಲು ಪುರುಷರು 21 ವರ್ಷದ ಮೇಲ್ಪಟ್ಟವರಾಗಿದ್ದು ಮಾಹೆಯಾನ 500 ರೂ.ಗಳ ಖಚಿತ ಸಂಪಾದನೆಯುಳ್ಳವರಾಗಿರಬೇಕು. ವಿವಾಹವಾಗುವ ದೇವದಾಸಿಯರು 18 ರಿಂದ 35 ವರ್ಷ ವಯಸ್ಸಿನವರಾಗಿದ್ದು ಕರ್ನಾಟಕದಲ್ಲಿ 2 ವರ್ಷಗಳಿಂದ ವಾಸವಾಗಿರಬೇಕು.

ಇದರೊಂದಿಗೆ, ಇನ್ನೂ ಅನೇಕ ಯೋಜನೆಗಳನ್ನು ರಾಜ್ಯ ಸರ್ಕಾರ ದೇವದಾಸಿಯರ ಪುನರುದ್ಧಾರಕ್ಕಾಗಿ ಹಮ್ಮಿಕೊಂಡಿದೆ. ಜನತಾ ಮನೆಗಳ ನೀಡಿಕೆ ಈ ಯೋಜನೆಗಳಲ್ಲೊಂದು. ಇದರೊಂದಿಗೇ ದೇವದಾಸಿಯರಿಗೆ ಸಾಲಗಳನ್ನು ಹಾಗೂ ಪ್ರೋತ್ಸಾಹ ಧನವನ್ನು ನೀಡಿ ತನ್ಮೂಲಕ ಅವರು ಸಣ್ಣ ಕೈಗಾರಿಕೆ, ಹೈನುಗಾರಿಕೆ ಮುಂತಾದ ವ್ಯಾಪಾರ, ಉದ್ಯೋಗಗಳನ್ನು ಪ್ರಾರಂಭಿಸಿ ಆರ್ಥಿಕವಾಗಿ ಸ್ವಾತಂತ್ರ್ಯವನ್ನು ಪಡೆಯುವಂತೆ ಮಾಡಲಾಗುವುದು.

ಅಲ್ಲದೆ ಸೌಂದತ್ತಿ ಮತ್ತು ಅಥಣಿಗಳಲ್ಲಿ ಅಬಲಾಶ್ರಮಗಳನ್ನು ರಾಜ್ಯ ಸರ್ಕಾರ ಸ್ಥಾಪಿಸಿದೆ. ಇಲ್ಲಿ ದೇವದಾಸಿ ಜೀವನವನ್ನು ತೊರೆದ ಮಹಿಳೆಯರಿಗೆ ಆಶ್ರಯ ನೀಡಲಾಗುತ್ತಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಿಮ್ಮ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕರನ್ನು ಸಂಪರ್ಕಿಸಿ.

ಅಸಹಾಯಕರಿಗೊಂದು ಸಹಾಯದ ಯೋಜನೆ

● ಕರ್ನಾಟಕ ವಾರ್ತೆ

ಕೊಪ್ಪಳ ತಾಲೂಕಿನ ಮಹಮದ್ ನಗರದಲ್ಲಿ

ಮಾಲೀಕನ ಗೂಂಡಾಗಳ ದಾಳಿ

ಬಾಂಬ್ ಸ್ಫೋಟ : 93 ಗುಡಿಸಲು ಭಸ್ಮ

ತುಂಗಭದ್ರಾ ದಂಡೆಯ ಕೊಪ್ಪಳ ತಾಲ್ಲೂಕಿನ ಬಂಡೆಗಳ ನಡುವಿನ ಮಹಮದ್ ನಗರದಲ್ಲಿ ಕಾವು ಕೂತಿದ್ದ ಸೇಡು, ಹಿಂಸೆಯ ಮೊಟ್ಟೆಗಳು ಮರಿ ಮಾಡತೊಡಗಿವೆ.

'ಪಂಚಮ'ದ ಅಕ್ಟೋಬರ್ ಸಂಚಿಕೆಯಲ್ಲಿ ರಾಯಚೂರು ದ.ಸಂ.ಸ.ದ. ಉರುಕುಂದಪ್ಪ ಸರ್ಕಾರ ಮುಂಜಾಗ್ರತೆ ವಹಿಸಿ ಇಲ್ಲಿನ ಭೂ ಸಮಸ್ಯೆಯನ್ನು ಬಗೆಹರಿಸದಿದ್ದರೆ ಜ್ವಾಲಾಮುಖಿ ಸ್ಫೋಟಿಸಬಹುದೆಂದು ಎಚ್ಚರಿಸಿದ್ದರು. ಕಣ್ಣು, ಕಿವಿ ಮುಚ್ಚಿಕೊಂಡು ಸರ್ಕಾರ ನಿದ್ರಿಸಿತು.

ಪರಿಣಾಮ ಜನವರಿ 15 ರ ಹಾಡುಹಗಲೇ ಸಕ್ಕರೆ ಕಾರ್ಖಾನೆಯ ಮಾಲೀಕನ ಸುಮಾರು 80 ಜನ ಗೂಂಡಾಗಳು ಬಂದು ಊರಿಗೆರಗಿದರು. ಬಂದೂಕು, ಕೈಬಾಂಬುಗಳನ್ನು ಹಿಡಿದಿದರು. ಪೆಟ್ರೋಲ್ ಪಂಜುಗಳನ್ನು ಗುಡಿಸಲುಗಳಿಗೆ ಎಸೆದರು. 20 ಜಾನುವಾರುಗಳು, 93 ಗುಡಿಸಲುಗಳು ಬೆಂದು ಭಸ್ಮವಾದವು. ಏಳು ಜನ ಹೊಡೆತಕ್ಕೀಡಾಗಿ ಗಾಯಗೊಂಡರು.

● ರಾಜಾ ಸಾಹೇಬ ಬಾಳೇಕಾಯಿ

15-1-87 ರಂದು. ಬೆಳಿಗ್ಗೆ ಸುಮಾರು 10-30 ರಲ್ಲಿ ಮುನಿರಾಬಾದ್‌ನ ಸಾಲಾರ ಜಂಗ ಸಕ್ಕರೆ ಕಾರ್ಖಾನೆ ಮಾಲೀಕ ಸುಶೀಲ್ ಬಾಬು ಮೊರಾರ್ಕನ ನೇತೃತ್ವದಲ್ಲಿ ಸುಮಾರು 80 ಜನ ಗೂಂಡಾಗಳು ಮಹಮ್ಮದ್ ನಗರದ ಮೇಲೆ ದಾಳಿ ನಡೆಸಿ ಆಸ್ಫೋಟಿಸಿದ್ದಾರೆ.

ಇವರೆಲ್ಲ ಗೋವಾ, ರಾಜಾಸ್ಥಾನ ಮತ್ತು ಉತ್ತರ ಪ್ರದೇಶದವರೆಂದು ಇವರು ಹಿಂದಿ ಮಾತನಾಡುತ್ತಿದ್ದರೆಂದು ಹೇಳಲಾಗಿದೆ. ಕೈಬಾಂಬು ಮತ್ತು ಹೊಗೆಬಾಂಬುಗಳನ್ನೆಸೆದಿದ್ದಾರೆ. ಡೀಸೆಲ್‌ನಲ್ಲಿ ಅದ್ದಿನ ಪಂಜುಗಳನ್ನು ಗುಡಿಸಲುಗಳ ಮೇಲೆ ಎಸೆದಿದ್ದಾರೆ. ಪರಿಣಾಮವಾಗಿ 93 ಗುಡಿಸಲು ಸುಟ್ಟು ಬೂದಿಯಾಗಿವೆ. 4 ನಾಯಿಗಳ ಬೆಂಗಾವಲಿನಲ್ಲಿ ಪಿಸ್ತೂಲ್ ಹಿಡಿದು ಜೀಪಿನಲ್ಲಿ ಅಡ್ಡಾಡುತ್ತಾ ಈ ಕೃತ್ಯಗಳನ್ನು ಮಾಡಿಸಿದ್ದಾರೆ. ಮೊರಾರ್ಕ, ಬಂದೂಕುಗಳು, ಸೋಡ ಬಾಟಲ್‌ಗಳನ್ನು ಸಹ ಈ ಹಲ್ಲೆಯಲ್ಲಿ ಬಳಸಿದ್ದಾರೆ.

93 ಗುಡಿಸಲು ಬೂದಿಯಾದದ್ದಲ್ಲದೇ 20 ಮೇಕೆಗಳು ಸುಟ್ಟು ಕರಕಾಗಿವೆ. ದನಕರುಗಳು ಸುಟ್ಟ ಗಾಯಗಳಿಂದ ನರಳುತ್ತಿವೆ, ಜನರೆಲ್ಲ ಕೂಲಿಗಳಿಗೆ ಹೋಗಿದ್ದರಿಂದ, ಹೆಂಗಸರು-ಮಕ್ಕಳೇ ಹೆಚ್ಚಾಗಿ ಊರಲ್ಲಿದ್ದರು. ಮಿಕ್ಕವರ ಪ್ರತಿಭಟನೆ ದಾಂಡಿಗರ ವ್ಯವಸ್ಥಿತ ದಾಳಿಯಲ್ಲಿ ಲೆಕ್ಕಕ್ಕಿಲ್ಲದಾಗಿತ್ತು. ರಾಂಜಿ ನಾಯಕ ಲಮಾಣಿ ತಲೆಗೆ ಅಪಾಯಕರ ಹೊಡೆತ ಬಿದ್ದಿದೆ. ಮುಕ್ತುಂ ಸಾಬ್, ಮಲ್ಲಯ್ಯಸ್ವಾಮಿ ಈ ಹಲ್ಲೆಯಲ್ಲಿ ಕೈಗಳನ್ನು ಮುರಿಸಿಕೊಂಡವರು. ಶಂಕರಪ್ಪ ಎಂಬಾತನನ್ನು ರೂಮೊಂದರಲ್ಲಿ ಕೂಡಿಹಾಕಿ ಬೆಂಕಿ ಹಚ್ಚಿದ್ದರು. ಮುಖ ಕೈಕಾಲು ಸುಟ್ಟು ಈತ ನರಳುತ್ತಿದ್ದಾನೆ. ಸಿದ್ದಮ್ಮ ಎಂಬ ಹರಿಜನ ಮಹಿಳೆಯನ್ನು ಓಡೋಡಿಸಿಕೊಂಡು ಹೊಡೆದಿದ್ದಾರೆ. 4 ದಿನಗಳ ಬಾಣಂತಿ ಲಕ್ಷ್ಮವ್ವ ಮತ್ತು ಅನೇಕ ಹೆಂಗಸರು ಮಕ್ಕಳುಗಳನ್ನು ಮನೆಗಳಿಂದ ಎಳೆದು ತಂದು ಆ ಮನೆಗಳಿಗೆ ಬೆಂಕಿ ಇಟ್ಟರು.

ಇಷ್ಟಲ್ಲದೆ ಗುಡಿಸಲುಗಳಲ್ಲಿದ್ದ ಎಲ್ಲಾ ವಸ್ತುಗಳು, ಬಟ್ಟೆಬರೆಗಳುಸುಟ್ಟು ಜನ ಬೀದಿಪಾಲಾಗಿದ್ದಾರೆ. ಭತ್ತ ಮತ್ತು ಇತರ ದವಸ ಧಾನ್ಯ, ಸಾವಿರಾರು ರೂಪಾಯಿ ನಗದು ನೋಟುಗಳೂ ಸುಟ್ಟುಹೋಗಿವೆ.

ಘಟನೆಗೆ ಹಿನ್ನೆಲೆ

ಮುನಿರಾಬಾದ್‌ನ ಸಾಲಾರ ಜಂಗ್ ಸಕ್ಕರೆ ಕಾರ್ಖಾನೆ 1954 ರಲ್ಲಿ ಪ್ರಾರಂಭವಾಯ್ತು. ಮಾಲೀಕ ಸುಶೀಲಬಾಬು ಮೊರ್ಕರಾ, (ಗುಜರಾತ್) 1962ರಿಂದ 82ರ ವರೆಗೆ 20 ವರ್ಷ, ಕಬ್ಬು ಬೆಳೆಸಲು ಸುತ್ತಲ ರೈತರಿಗೆ ಬೀಜವನ್ನು ಮುಫತ್ ಹಂಚಲು ಕರ್ನಾಟಕ ಸರ್ಕಾರದೊಂದಿಗೆ ಅಗ್ರಿಮೆಂಟ್ ಮೂಲಕ ಸುತ್ತಲ 7 ಹಳ್ಳಿ ಪ್ರದೇಶದ 1500 ಎಕರೆ ಜಮೀನನ್ನು ಲೀಸ್ ಪಡೆದ.

ಸುತ್ತ 7 ಹಳ್ಳಿ ಪ್ರದೇಶದ ಇನ್ನಷ್ಟು ಜಮೀನು ವತ್ತುವರಿಮಾಡಿ 1500 ಎಕರೆಯನ್ನು 3767 ಎಕರೆಗೆ ಹೆಚ್ಚಿಸಿಕೊಂಡ, ಮತ್ತು ವಿಜಯನಗರ ಜಾಯಿಂಟ್ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ ಲಿ, ಪ್ರಾರಂಭಿಸಿ, ಅದರ ಹೆಸರಿಗೆ ಒಂದಿಷ್ಟು ಜಮೀನು ವರ್ಗಾಯಿಸಿದ. ಇದರ ಸದಸ್ಯರೂ ಅವನ ಕುಟುಂಬದವರೇ. ನಾಲ್ಕೈದು ವರ್ಷ ಕಬ್ಬು ಬೆಳೆದನಂತರ ಜನರಿಗೆ ಜಮೀನನ್ನು ಗುತ್ತಿಗೆಗೆ ಎಕರೆ 9ಚೀಲ ದವಸಕ್ಕೆ ಹಂಚಿದ. ಇದುವರೆಗೆ ಅದೇ ಜನ ತಲಾ ಸುಮಾರು 2 ಎಕರೆಯಂತೆ ಸಾಗು ಮಾಡುತ್ತಿದ್ದಾರೆ.

1983 ರಲ್ಲಿ ಸರ್ಕಾರಿ ಕಾನೂನು ಉಲ್ಲಂಘಿಸಿದ್ದಕ್ಕಾಗಿ, ಭೂನ್ಯಾಯ ಮಂಡಲಿ ಈ ಭೂಮಿ ಸರ್ಕಾರದ್ದೆಂದು ತೀರ್ಪು ನೀಡಿತು.

ಸರ್ಕಾರಿ ಕಾನೂನು ಉಲ್ಲಂಘಿಸಿದ್ದಕ್ಕಾಗಿ ಕೋಆಪರೇಟಿವ್ ಫಾರ್ಮಿಂಗ್ ಸೊಸೈಟಿ ಲಿ. ಯನ್ನು ಲಿಕ್ವಿಡೇಟ್ ಮಾಡಿತು. ಈ ಎರಡರ

(6 ನೇ ಪುಟಕ್ಕೆ)

ಎರಡು ಉಪನ್ಯಾಸಗಳು

ಭಾರತದ ಬೌದ್ಧಿಕ ದಾರಿದ್ರ್ಯ

ಪ್ರಾಚೀನ ಮತ್ತು ಮಧ್ಯಕಾಲ

ಮೂಲ : ವಿ. ಆರ್. ನಾರ್ಲ

ಅನು : ಗಂಗಾಧರಮೂರ್ತಿ

4

"ಸಮಾನತೆಯ ಪರಿಕಲ್ಪನೆಯು ವಾಸ್ತವ ಸಂಗತಿಗಳ ಫಲವಾಗಿ ಬಂದದ್ದಲ್ಲ. ಅದು 'ಕೇವಲ' ಅಗತ್ಯಗಳು ಮತ್ತು ಆಕಾಂಕ್ಷೆಗಳನ್ನು ಆಧರಿಸಿದ್ದು. ಸಮಾನತೆಯನ್ನು ಜಾರಿಗೆ ತರುವುದೆಂದರೆ ಎಲ್ಲರನ್ನೂ ಪ್ರೊಕ್ರೆಸ್ಟಿಯಿನ್ * ಮಂಚದ ಮೇಲೆ ಮಲಗಿಸುವುದೇ ಆಗಿದೆ. ಯಾರೇ ಇಬ್ಬರು ವ್ಯಕ್ತಿಗಳನ್ನು ತೆಗೆದುಕೊಂಡರೂ ದೈಹಿಕವಾಗಿ, ಭೌತಿಕವಾಗಿ ಮತ್ತು ಆಧ್ಯಾತ್ಮಿಕವಾಗಿ ಒಬ್ಬರಂತೆ ಮತ್ತೊಬ್ಬರಿರುವುದು ಸಾಧ್ಯವಿಲ್ಲ. ಲಿಂಗ ಭೇದವೂ ಕೂಡ ಭಿನ್ನ ಕ್ರಿಯೆಗಳಿಗಾಗಿ ಭಿನ್ನ ಮಾನಸಿಕ ಲಕ್ಷಣಗಳಿಂದ ಕೂಡಿದ್ದು, ದೈಹಿಕವಾಗಿ ಬೇರೆಯೇ ಆದ ಬಲ ಮತ್ತು ರಚನೆಗಳನ್ನು ಉಳ್ಳದ್ದು... ಸ್ತ್ರೀ–ಪುರುಷರು ಬೌದ್ಧಿಕವಾಗಿ ಮತ್ತು ಮಾನಸಿಕವಾಗಿ ಸಮಾನವಾದ ಶಕ್ತಿಯನ್ನು ಹೊಂದಿರುವುದಿಲ್ಲ. ಎಲ್ಲರಿಗೂ ಅನ್ವಯವಾಗುವಂತಹ ಒಂದು ಸಾರ್ವಕಾಲಿಕ ನಿಯಮವು ಸಾಧ್ಯವಿಲ್ಲ. ಪರಿಸ್ಥಿತಿಗಳು ಬದಲಾಗಿ ಅವುಗಳಿಗೆ ಸರಿಯಾದ ಹೊಂದಾಣಿಕೆಯ ಅಗತ್ಯ ಕಂಡುಬರುತ್ತದೆ. ಕಾನೂನಿನ ಕಣ್ಣಿನಲ್ಲಿ ಎಲ್ಲರಿಗೂ ಸಮಾನ ಎನ್ನುವ ಘೋಷಣೆ ಇದ್ದರೂ ಒಂದಲ್ಲಾ ಒಂದು ಆಧಾರದ ಮೇಲೆ ತಾರತಮ್ಯವನ್ನು ಉಳಿಸಿಕೊಳ್ಳುವುದು ಅತ್ಯವಶ್ಯ. ನ್ಯಾಯವನ್ನು ನೀಡುವ ನಿಷ್ಪಕ್ಷಪಾತ ಸಂದರ್ಭದಲ್ಲೂ ಸಹ ಸಮಾನತೆಯು ಸೂಕ್ತವಲ್ಲ ಎನಿಸುತ್ತದೆ...

ವರ್ಣಗಳ ವಿಭಾಗವನ್ನು ಕೇವಲ ದುಡಿಮೆಯ ವಿಭಾಗದ ದೃಷ್ಟಿಯಿಂದ ಮಾಡದೆ ಮಾನಸಿಕ ವ್ಯತ್ಯಾಸಗಳ ಆಧಾರದ ಮೇಲೆ ಕೂಡ ವಿವರಿಸಲಾಗಿದೆ. ಅದು ಗುಣ ಎಂಬ ಮನೋಧರ್ಮಗಳಲ್ಲಿನ ವ್ಯತ್ಯಾಸಗಳ ಮೇಲೆ ಆಧಾರಿತವಾಗಿದೆ. ಗುಣದ ಮಾನದಂಡವನ್ನು ವ್ಯಕ್ತಿಯ ಶರೀರ ರಚನಾ ಕ್ರಮಕ್ಕೆ ಹೋಲಿಸಬಹುದು. ಈ ಮಾನದಂಡಕ್ಕನುಗುಣವಾಗಿ ಹಿಂದಿನ ಜನ್ಮದ ತಾಮಸ ಗುಣದ ಫಲರೂಪವಾದ ಕರ್ಮದ ಆಧಾರದ ಮೇಲೆ ಕರ್ಮದ ನಾಲ್ಕನೇ ವರ್ಣವನ್ನು ನಮೂದಿಸಲಾಗಿದೆ.

'ಮನುಸ್ಮೃತಿಯಲ್ಲಿ' ವಿವರಿಸಲಾಗಿರುವ ಸಮಾಜ ರಚನೆಯಲ್ಲಿ ನಾಗರಿಕ ದೃಷ್ಟಿಯ ಸಮಾನತೆಯು ಅರ್ಥರಹಿತವಾದದ್ದು. ಸ್ಥಾನಮಾನದಲ್ಲಾಗಲೀ, ಆದಾಯದಲ್ಲಾಗಲೀ ಸಮಾನತೆ ಸಾಧ್ಯವಿಲ್ಲ. ಮನುಷ್ಯನ ಅಗತ್ಯಗಳು, ಸಾಧನೆಗಳು ಅಸಮಾನತೆಯನ್ನು ಒತ್ತಿ ಹೇಳುತ್ತವೆ. ವ್ಯಕ್ತಿ ಮತ್ತು ಸಮೂಹದ ಬೆಳವಣಿಗೆಯ ದೃಷ್ಟಿಯಿಂದ ಈ ಸಂಗತಿಯ ಪ್ರಾಮುಖ್ಯತೆಯನ್ನು ಗುರ್ತಿಸುವುದು ತೀರಾ ಅಗತ್ಯ. 31 ಇದೆಲ್ಲಾ ಅತ್ಯಂತ ಕೆಳಮಟ್ಟದ ತಿಳಿಗೇಡಿತನ. ಬರ್ಟ್ರೆಂಡ್ ರಸೆಲ್ ಹೇಳುವ "ಸರ್ಕಾರದ ಯೋಜಿತ ಕಾರ್ಯಕ್ರಮಗಳಿಂದ ಎಲ್ಲರೂ ಒಪ್ಪಿಕೊಳ್ಳುವಂತೆ ಮಾಡುವ ನೀಚ ಮಟ್ಟದ ತಿಳಿಗೇಡಿತನವು ಇಲ್ಲದಿಲ್ಲ".

ಪ್ಲೇಟೋ ತಾನು ಕಟ್ಟಬೇಕೆಂದಿದ್ದ ಗಣರಾಜ್ಯವು ಅಸಂಗತ ಮತ್ತು ಅವಾಸ್ತವ ಎಂದು ತಿಳಿದಿದ್ದರೂ ಅದನ್ನು ಜನಗಳು ನಂಬುವಂತೆ ಮಾಡುವುದು ಅಸಾಧ್ಯವೇನೂ ಅಲ್ಲ ಎನ್ನುವ ಆತ್ಮವಿಶ್ವಾಸವನ್ನು ಹೊಂದಿದ್ದ. 32 ಇದಕ್ಕಿಂತಲೂ ತೀರಾ ಹೀನಾಯವೆಂದರೆ ನಮ್ಮಿಂದ ಪೂರ್ಣಗೊಳ್ಳಬೇಕಾದ ಯಾವುದೋ ಘನ ಉದ್ದೇಶವಿದೆ ಎಂದು ನಾವೇ ಕಲ್ಪಿಸಿಕೊಂಡ ಭ್ರಮಾ ಲೋಕವೊಂದರಲ್ಲಿ ನಾವು ಒದ್ದಾಡುತ್ತಿರುವುದು. ಭೌತವಾದದಿಂದ ಜಗತ್ತನ್ನು ರಕ್ಷಿಸಬೇಕು ಎನ್ನುವುದೇ ನಮ್ಮ ದಿವ್ಯೋದ್ದೇಶವಾಗಿಬಿಟ್ಟಿದೆ. ರಸೆಲ್‌ನಂತೆ ಧೀಮಂತನೂ, ಮೌಲಿಕ ಚಿಂತಕನೂ ಆದ ಭಾರತೀಯ ಲೇಖಕನು ಬೂಸಾ ಬೌದ್ಧಿಕತೆಯ ರೂಪುರೇಷೆಗಳು (An outline of Intelleafual rubbish, ರಸೆಲ್‌ನ Un-Popular Esseys) ಕೃತಿಯಲ್ಲಿನ ದೀರ್ಘ ಅಧ್ಯಾಯ ಎನ್ನುವ ಲೇಖನನ್ನು ಭಾರತೀಯ ದೃಷ್ಟಿಕೋನದಿಂದ ಬರೆಯುವುದು ಸಾಧ್ಯವಾಗಿದ್ದರೆ! ಎಂದು ಹಂಬಲಿಸುವಂತಾಗಿದೆ. ರಸೆಲ್‌ನಂಥವರು ಕಾಣಿಸಿಕೊಳ್ಳುವುದು ತೀರಾ ವಿರಳ. ಕೊನೆಯಪಕ್ಷ "Natural History of Noncence" ಕೃತಿಯ ಲೇಖಕನಾದ ಬರ್ಗೆನ್ ಎವಾನ್ಸ್‌ನಂತಹವರಾರೂ ನಮ್ಮಲ್ಲಿ ಕಾಣಿಸಿಕೊಳ್ಳುವುದು ಆರೋಗ್ಯಕರ ವಿಷಯ.

ಭಾರತೀಯ ಭೌತವಾದವನ್ನು ಕುರಿತು ಅತ್ಯುತ್ತಮ ಕೃತಿಗಳನ್ನು ರಚಿಸಿರುವ ದೇವೀಪ್ರಸಾದ ಚಟ್ಟೋಪಾಧ್ಯಾಯ ಅವರು ಈ ಸಂದರ್ಭದಲ್ಲಿ ನನ್ನ ನೆನಪಿಗೆ ಬರುತ್ತಾರೆ. ಅವರ ಕೃತಿಗಳಲ್ಲಿ ಭಾರತೀಯ ವಿಚಾರ ಪರಂಪರೆಯ ಹಲವಾರು ಕತ್ತಲ ಮೂಲೆಗಳ ಮೇಲೆ ಹೊಸ ಬೆಳಕಿನ ಕಿರಣಗಳನ್ನು ಚೆಲ್ಲಿರುವುದು ಕಂಡುಬರುತ್ತದೆ. ವೈದಿಕರು ತಮ್ಮ ಸ್ವಾರ್ಥಕ್ಕಾಗಿ ಯಾವ ಮಟ್ಟಕ್ಕೆ ಇಳಿಯಬಲ್ಲರೆಂಬುದನ್ನು ಸಾಕ್ಷಾಧಾರಪೂರ್ವಕವಾಗಿ ತೋರಿಸುವ ಎದೆಗಾರಿಕೆ ಅವರದು. ತೆಲುಗಿನಲ್ಲಿ "ಬರ್ರಿದಾನೆ ವೇದಾಂತ ಬ್ರಾಹ್ಮಣ: ತಟ್ಟೆ, ಬಟ್ಟಲು ಜೋಪಾನ" ಎನ್ನುವ ಗಾದೆ ಇದೆ. ಈ ರೀತಿಯ ಗಾದೆ ಕನ್ನಡದಲ್ಲಿ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ.

ವಿಷಯದ ದಿಕ್ಕನ್ನು ಬದಲಾಯಿಸಿದ್ದಕ್ಕಾಗಿ ಕ್ಷಮೆ ಕೇಳುತ್ತೇನೆ. ಈ ವಿಷಯಪಲ್ಲಟವನ್ನು ನಿರ್ದಿಷ್ಟ ಉದ್ದೇಶಕ್ಕಾಗಿಯೇ ಮಾಡಿದ್ದೇನೆ. ದೇವೀ ಪ್ರಸಾದರು ಈ ವಿಶ್ವವಿದ್ಯಾನಿಲಯದಲ್ಲಿ "ಭಾರತೀಯ ತತ್ವಶಾಸ್ತ್ರದ ಎರಡು ಪ್ರಕಾರಗಳು" 34 ಎನ್ನುವ ಉಪನ್ಯಾಸ ಮಾಡಿ ಬಹಳ ಕಾಲವೇನೂ ಆಗಿಲ್ಲ. ಈ ಉಪನ್ಯಾಸದಲ್ಲಿ ಅವರು ಆದರ್ಶವಾದಿಗಳ ಹುರುಳಿಲ್ಲದ ತರ್ಕವನ್ನು ಎಲ್ಲರಿಗೂ ತಿಳಿಯುವಂತೆ ಎತ್ತಿ ತೋರಿಸಿದ್ದಾರೆ. ಸಂವೃತ್ತಿ ಸತ್ಯ (ಸಾಕ್ಷಾಧಾರಿತ ಸತ್ಯ) ಮತ್ತು ಪಾರಮಾರ್ಥಿಕ ಸತ್ಯ ಎನ್ನುವ ಶಬ್ದಗಳನ್ನು ಉಪಯೋಗಿಸಿ ನಮ್ಮನ್ನು ವೇದಾಂತಿಗಳು ಹೇಗೆ ಬೆಪ್ಪುಗೊಳಿಸುವ ಆಟವಾಡಬಲ್ಲರು ಎನ್ನುವುದನ್ನೂ ತೋರಿಸಿದ್ದಾರೆ.

ಬುದ್ಧನ ಮೂಲ ಬರಹಗಳಿಗೆ ಬೇರೆಯೇ ತಿರುವನ್ನು ಕೊಡುವ ಪ್ರಯತ್ನವನ್ನು ಸಮರ್ಥಿಸಿಕೊಳ್ಳಲು ಕೆಲವು ಗ್ರಂಥಗಳನ್ನು ಫೋರ್ಜರಿ ಮಾಡಿದ ನಾಗಾರ್ಜುನನ ಮತ್ತು

---

* ಪ್ರೊಕ್ರೆಸ್ಟಿಯಸ್ – ಗ್ರೀಸ್ ದೇಶದ ಅಟ್ಟಿಕಾ ಪ್ರದೇಶದ ದರೋಡೆಕಾರ, ಸೆರೆಯಾಳುಗಳನ್ನು ತನ್ನಲ್ಲಿದ್ದ ಮಂಚದ ಮೇಲೆ ಮಲಗಿಸಿ ಬಿಗಿಯುತ್ತಿದ್ದ. ಉದ್ದವಾಗಿದ್ದವರನ್ನು ಮಂಚದ ಅಳತೆಗೆ ಕತ್ತರಿಸಿ, ತುಂಡಾಗಿದ್ದವರನ್ನು ಎಳೆಯುತ್ತಾ, ಬಿಗಿದು ಕೊಲ್ಲುವುದು ಇವನ ಅಭ್ಯಾಸವಾಗಿತ್ತು. ವೈಯಕ್ತಿಕತೆಯು ವ್ಯವಸ್ಥೆಗೆ ಪೂರಕವಾಗಿರಬೇಕು ಎನ್ನುವ ಸಮಾನತೆಯ ಪರಿಕಲ್ಪನೆಯನ್ನು ಹೀಗಳೆಯುವವರು ಬಳಸುವ ಅನ್ವರ್ಥಪದ.(ಅನು)

ಇತರ ಮಹಾಯಾನವಾದಿಗಳ ಅಪರಾಧವನ್ನು ಅವರು ಬಯಲಿಗೆಳೆದಿದ್ದಾರೆ. ಭಾರತೀಯ ಭೌತವಾದದ ಪ್ರಮುಖ ಪ್ರಕಾರಗಳಾದ ಲೋಕಾಯುತ, ಸಾಂಖ್ಯ, ನ್ಯಾಯ ವೈಶೇಷಿಕಗಳು ಹೇಗೆ ತಮ್ಮನ್ನು ಧರ್ಮಾಂಧರ ತುಳಿತದಿಂದ ರಕ್ಷಿಸಿಕೊಳ್ಳಲು ಆಸ್ತಿಕವಾದಿಗಳಂತೆ ತೋರಿಸಿಕೊಳ್ಳಬೇಕಾಯಿತು ಎನ್ನುವುದರ ಬಗ್ಗೆಯೂ ಅವರು ವಿವರಗಳನ್ನು ನೀಡಿದ್ದಾರೆ.

ಚಟ್ಟೋಪಾಧ್ಯಾಯರು ಹೇಳದೇ ಬಿಟ್ಟ ಕೆಲವೊಂದು ಅಂಶಗಳನ್ನು ಮಾತ್ರ ನಾನಿಲ್ಲಿ ಹೇಳಬಯಸುತ್ತೇನೆ. ನಾಗಾರ್ಜುನ ಮತ್ತು ಅವನ ಇನ್ನಿತರ ಮಿತ್ರರು ಮಾತ್ರವೇ ಗ್ರಂಥಗಳನ್ನು ಫೋರ್ಜರಿ ಮಾಡಿದರೆಂದಲ್ಲ. ಒಂದು ರೀತಿಯಲ್ಲಿ ಫೋರ್ಜರಿ ಮಾಡುವುದು ಭಾರತೀಯರಿಗೆ ರಾಷ್ಟ್ರೀಯ ಸಂಪ್ರದಾಯವಾಗಿ ಬಿಟ್ಟಿದೆ. ಭಗವದ್ಗೀತೆಯಲ್ಲಿ ಕಂಡು ಬರುವ ಸಾಂಖ್ಯ, ಯೋಗ, ಭಕ್ತಿ ಇವುಗಳಲ್ಲದೆ, ನೀತಿ ಹಾಗೂ ಆಹಾರ ಸೇವನೆಗೆ ಸಂಬಂಧಪಟ್ಟ ತುಣುಕುಗಳೆಲ್ಲವನ್ನೂ ಪ್ರಕ್ಷಿಪ್ತಗಳೆನ್ನುವ ಆಧಾರದಿಂದ ಮಾತ್ರ ವಿವರಿಸಲು ಸಾಧ್ಯ.

ಗೀತೆಯ ವಿಮರ್ಶಾತ್ಮಕ ಅಧ್ಯಯನಕ್ಕಾಗಿ ತನ್ನ ಜೀವನದ ಹಲವಾರು ವರ್ಷಗಳನ್ನು ಮೀಸಲಿಟ್ಟ ಜರ್ಮನ್ ವಿದ್ವಾಂಸ ರುಡೋಲ್ಫ್ ಆಟೋನ ಪ್ರಕಾರ ಗೀತೆಯ ಮೂಲ ಗ್ರಂಥದಲ್ಲಿದ್ದುದು 73 ಶ್ಲೋಕಗಳು ಮಾತ್ರ.35 ಈ ಗೀತೆಯನ್ನು ಒಳಗೊಂಡಿರುವ ಮಹಾಭಾರತವೂ ಕೂಡ ಇದೇ ರೀತಿಯಲ್ಲಿ ಹಲವಾರು ಶತಮಾನಗಳ ಅವಧಿಯಲ್ಲಿ ಆಕ್ರಮವಾದ ತಿದ್ದುಪಡಿಗೆ ಒಳಗಾಗಿದೆ. ಪ್ರಾರಂಭದಲ್ಲಿ ಇದು ಜಯ ಎಂದು ಕರೆಯಲಾದ ಕೇವಲ 8,800 ಶ್ಲೋಕಗಳ ಗ್ರಂಥ. ಕಾಲಾನಂತರದಲ್ಲಿ ಹೊಸ ಹೊಸ ವಿಷಯಗಳನ್ನು ಸೇರಿಸಿ 24,000 ಶ್ಲೋಕಗಳ ದ್ವಿತೀಯ ಆವೃತ್ತಿಯನ್ನು ಪ್ರಕಟಿಸಿದ್ದಷ್ಟೇ ಅಲ್ಲದೆ ಗ್ರಂಥದ ಹೆಸರನ್ನು ಭಾರತ ಎಂದು ಬದಲಾಯಿಸಲಾಯಿತು. ಆದರೆ "ಮಹಾಭಾರತ" ಎಂದು ನಾವು ಕರೆಯುತ್ತಿರುವ ಗ್ರಂಥದಲ್ಲಿ 96,836 ಶ್ಲೋಕಗಳಿವೆ.36 ಈ ಸಂಖ್ಯೆಯು ಪ್ರಾಂತ್ಯದಿಂದ ಪ್ರಾಂತ್ಯಕ್ಕೆ ಸ್ವಲ್ಪ ಹೆಚ್ಚು ಕಡಿಮೆಯಾಗಬಹುದು. ಇಂತಹ ವಿಸ್ತರಣೆಯ ಪ್ರತಿಕ್ರಿಯೆಯು ಯಾವಾಗ ಆರಂಭವಾಯಿತು ಎಂಬುದು ಅಸ್ಪಷ್ಟವಾಗಿದ್ದರೂ ಅದು ಕ್ರಿ.ಶ. ನಾಲ್ಕನೇ ಶತಮಾನದವರೆಗೂ ನಡೆಯಿತು ಎನ್ನಬಹುದು.37

ರಾಮಾಯಣದ ವಿಷಯದಲ್ಲಿಯೂ ಕೂಡಾ ಕನಿಷ್ಠ ಐದು ಶತಮಾನಗಳವರೆಗೆ ಪ್ರಕ್ಷಿಪ್ತಗಳನ್ನು ಸೃಷ್ಟಿಸುವ ಕಾರ್ಯ ನಡೆಯುತ್ತಲೇ ಇತ್ತು. ಬೇರೆ ಬೇರೆ ವಿಷಯಗಳನ್ನು ಸೇರಿಸುವುದರ ಜೊತೆಗೆ ಕೆಲವನ್ನು ತೆಗೆದು ಹಾಕುವ, ಬದಲಾಯಿಸುವ ಹಾಗೂ ತಿದ್ದುಪಡಿ ಮಾಡುವ ಕಾರ್ಯವು ವ್ಯಾಪಕವಾಗಿ ನಡೆಯುತ್ತಿತ್ತು. ವೇದಗಳ ಅಪೌರುಷೇಯ ಸ್ವಭಾವವನ್ನೂ, ವೈದಿಕ ಕರ್ಮಕಾಂಡಗಳ ಶ್ರೇಷ್ಠತೆಯನ್ನೂ ಮತ್ತು ಪುರೋಹಿತರೆಂದರೆ ಭೂಸುರರು ಎನ್ನುವ ಅಹಂಭಾವವನ್ನೂ ವಿರೋಧಿಸಿದ ಬೌದ್ಧ, ಜೈನ ಮತ್ತಿತರ ನಾಸ್ತಿಕವಾದಿಗಳ ಸದ್ದಡಗಿಸುವ ಉದ್ದೇಶದಿಂದಲೇ ಮೂಲ ಕೃತಿಗಳನ್ನು ಆಕ್ರಮವಾಗಿ ತಿದ್ದುಪಡಿ ಮಾಡಲಾಯಿತು.

ರಾಮಾಯಣಕ್ಕೆ ಐತಿಹಾಸಿಕವಾದ ಆದಾರವಿದ್ದರೆ ರಾಮನು ಬುದ್ಧನಿಗಿಂತ ಹಲವಾರು ಶತಮಾನಗಳಷ್ಟು ಹಿಂದೆಯೇ ಜೀವಿಸಿದಿರಬೇಕು. ಆದರೂ ರಾಮನು ಬುದ್ಧನನ್ನು 'ಕಳ್ಳ', ಎಂದು ಆಪಾದಿಸುವುದು ಕಂಡು ಬರುತ್ತದೆ. ಗೀತೆಯ ವಿಸ್ತೃತರೂಪದ ಬಗ್ಗೆ ಹೇಳುತ್ತಾ ಆಟೋ ಇದು "ಮೂಲ ಗ್ರಂಥವನ್ನು ಬ್ರಾಹ್ಮಣೀಕರಿಸುವ ಅತ್ಯಂತ ಸ್ಪಷ್ಟವಾದ" 38 ಪ್ರಯತ್ನವೆನ್ನುತ್ತಾನೆ. ಈ ಮಾತು ಮಹಾಭಾರತಕ್ಕೂ ಅನ್ವಯಿಸುವಂತಹದ್ದು.

ಗೀತೆಯ ಮೂಲಗ್ರಂಥದಲ್ಲಿದ್ದುದ್ದು 73 ಶ್ಲೋಕಗಳು ಮಾತ್ರ. 8,800 ಶ್ಲೋಕಗಳ ಜಯ ಎಂಬ ಗ್ರಂಥ 96, 836 ಶ್ಲೋಕಗಳ ಮಹಾಭಾರತ ಆಗಿದೆ.

ಗೌತಮ ಬುದ್ಧ ಮತ್ತು ಮಹಾವೀರರು ಕ್ಷತ್ರಿಯ ಪಂಗಡಕ್ಕೆ ಸೇರಿದವರು ಮತ್ತು ಬ್ರಾಹ್ಮಣರಿಗಿಂತ ತಮ್ಮ ಜಾತಿಯನ್ನು ಒಂದು ಸುತ್ತುಮೇಲೇರಿಸಿದವರು.ಕಳೆದುಕೊಂಡತಮ್ಮ ಸ್ಥಾನ ಮತ್ತು ಘನತೆಯನ್ನು ಮರಳಿ ಪಡೆಯಲು ಬ್ರಾಹ್ಮಣರು ನಾಲ್ಕು ವೇದಗಳನ್ನೂ, ಪ್ರಮುಖ ಉಪನಿಷತ್ತುಗಳನ್ನೂ ಬಿಟ್ಟು ತಮ್ಮ ಮಿಕ್ಕೆಲ್ಲಾ ಗ್ರಂಥಗಳನ್ನು ಅಕ್ಷರಶಃ ಪುನರ್‌ರಚಿಸಿದರು. ಬ್ರಾಹ್ಮಣರ ಪೂಜೆ ರಾಜನ ಪ್ರಮುಖ ಕರ್ತವ್ಯ ಎನ್ನುವ ಮಾತನ್ನು ಮಹಾಭಾರತದ ಪರಿಷ್ಕರಣಕಾರರು ಕ್ಷತ್ರಿಯನೇ ಆದ ಭೀಷ್ಮನಿಂದ ಮತ್ತೊಬ್ಬ ಕ್ಷತ್ರಿಯನಾದ ಯುಧಿಷ್ಠಿರನಿಗೆ ಹೇಳಿಸುತ್ತಾರೆ. ಮಹಾಭಾರತದ ಅನುಶಾಸನ ಪರ್ವದ ಈ ಸಾಲುಗಳನ್ನು ನಾವು ನೋಡಬಹುದು. "ಜ್ಞಾನಿಗಳಾದ ಬ್ರಾಹ್ಮಣರನ್ನು ಪೂಜಿಸುವುದು ಪಟ್ಟಾಭಿಷಕ್ತ ರಾಜನ ಆದ್ಯ ಕರ್ತವ್ಯ. ತನ್ನನ್ನು ರಕ್ಷಿಸಿಕೊಳ್ಳುವಂತೆ ಅಥವಾ ತನ್ನ ಮಕ್ಕಳನ್ನು ಕಾಪಾಡುವಂತೆ ಇವರನ್ನು ರಕ್ಷಿಸಬೇಕು; ಗೌರವಿಸಬೇಕು; ಅವರಿಗೆ ತಲೆಬಾಗಿ ನಡೆಯಬೇಕು. ಸ್ವಂತ ತಂದೆ ತಾಯಿಗಳಂತೆ ಭಯಭಕ್ತಿಯಿಂದ ಕಾಣಬೇಕು. ಬ್ರಾಹ್ಮಣ ಸಂತೃಪ್ತಿಯೇ ದೇಶದ ಅಭ್ಯುದಯ. ಅವರು ಅಸಂತೃಪ್ತಗೊಂಡರೆ ಸರ್ವನಾಶ ಖಂಡಿತ. ಅವರು ಇರುವ ದೈವವನ್ನು ಇಲ್ಲದಂತೆ ಮಾಡಬಲ್ಲರು, ಇಲ್ಲದ ದೈವವನ್ನು ಇರುವಂತೆ ಮಾಡಬಲ್ಲರು. ಅವರಿಂದ ಹರಸಲ್ಪಡುವವರು ಸುಖವಾಗಿ ಬಾಳುತ್ತಾರೆ. ಕೋಪಕ್ಕೆ ತುತ್ತಾದವರು ಶೋಚನೀಯವಾಗಿ ನರಳುತ್ತಾರೆ. ಬ್ರಾಹ್ಮಣರ ಮಾತುಗಳನ್ನು ಅಲಕ್ಷಿಸಿದ, ಶಕ, ಯವನ, ಕಾಂಭೋಜ, ಮತ್ತಿತರ ಕ್ಷತ್ರೀಯ ಪಂಗಡಗಳು ಶೂದ್ರವೆನಿಸಿದವು. 39

ಇಂತಹ ಗಂಭೀರಪ್ರಮಾಣದ ಸಾಹಿತ್ಯಕ ವಂಚನೆ ಜಗತ್ತಿನ ಇತಿಹಾಸದ ಬೇರೆಲ್ಲೂ ಕಾಣಿಸದು. ಈ ಮೋಸವು ಎಷ್ಟು ವಾಪಕ್ಕವಾಗಿ ನಡೆದಿದೆ ಎನ್ನುವುದರ ಜೊತೆಗೆ ರಕ್ತ ಹೆಪ್ಪುಗಟ್ಟಿಸುವ ಸಿನಿಕತನದಿಂದ ಹೇಗೆ ಈ ಕ್ರೂರ ಕೃತ್ಯವನ್ನು ಮಾಡುತ್ತಾ ಬಂದಿದ್ದಾರೆ ಎನ್ನುವುದು ನಮಗೆ ಗಾಬರಿಯನ್ನುಂಟು ಮಾಡುತ್ತದೆ. ಕೆಲವೊಂದು ಸನ್ನಿವೇಶದಲ್ಲಿ ಗ್ರಂಥದ ಒಂದು ಪದದ ಕಾಗುಣಿತ ಬದಲಾದರೂ ಹಲವಾರು ಜನ ಬಲಿಯಾಗುವುದು ಸಾಧ್ಯವಿತ್ತು. ಉದಾಹರಣೆಗೆ, ವಿಧವೆಯನ್ನು ಪತಿಯ ಶವದೊಂದಿಗೆ ಸುಡುವ ಘೋರ ಪದ್ಧತಿಯನ್ನು ಸಮರ್ಥಿಸಲು ಕೆಲವು ದುರಾತ್ಮ ಪುರೋಹಿತರು ಋಗ್ವೇದದ ಒಂದು ಶ್ಲೋಕದಲ್ಲಿ ಬರುವ ಅಗ್ರೇ ಎಂಬ ಪದವನ್ನು ಅಗ್ನೇ ಎಂದು ಬದಲಾಯಿಸಿದರು. ಮ್ಯಾಕ್ಸ್‌ಮುಲರ್ ಹೇಳುವಂತೆ "ಇದು ಬಹುಶಃ ನೀತಿಗೆಟ್ಟ ಪುರೋಹಿತಶಾಹಿಯ ಅತ್ಯಂತ ಕ್ರೂರಕಾರ್ಯ. ತಪ್ಪಾಗಿ ಅನುವಾದಿಸಿದ, ಅನ್ವಯಿಸಿದ ಮತ್ತು ವಿರೂಪಗೊಳಿಸಿದ ಶ್ಲೋಕದ ಅಧಿಕಾರವಾಣ್ಯತೆಯಿಂದಾಗಿ ಸಾವಿರಾರು ಜೀವಗಳು ಬಲಿಯಾಗಿರುವುದನ್ನು ನಾವು ಇಲ್ಲಿ ಕಾಣಬಹುದು." 40

(ಮುಂದುವರೆಯುವುದು)

ಆರ್ತಗೀತೆ

"ಅಸ್ಥಿಮೂಲ ಪಂಜರಗಳು
ಆರ್ತತೆಯ ಮಂದಿರಗಳು
ಯಾವ ಲೋಕವಿದು ತಾಯಿ–
ತುಳುಕುತ್ತಿವೆ ಯಾರ ಕಣ್ಣೀರ ಹನಿಗಳು?"

"ಹಿಡಿಯನ್ನವಿಲ್ಲದ ಜಾಗವಿದು
ಒಡಲಾಳದ ತಾಪವಿದು
ಯುಗ ಯುಗಗಳ ಶಾಪವಿದು
ಭೂಮಿ ಜಂಬ ಹೆಸರಿನದು "

ಭಟಭಟಾ ಶಬ್ದವೇನು
ನೆತ್ತರಲದ್ದಿದ ಆ ಚಕ್ರವೇನು
ಯಾವ ಸ್ಥಳವಿದು ದೇವಿ
ಎಲ್ಲಿ ? ಕಾಣಿಸಲೊಲ್ಲನೇಕೆ ಕಾಲನೇಮಿ ?

"ಆಕಳಿಸುತಿದೆ ಮಂತ್ರಶಾಲೆ
ಚಕ್ರಕೆ ಸಿಲುಕಿ ನಲುಗುತ್ತಿಹ ಮಾನವ
ಹೃದಯ ಅತ್ತು, ಗೋಗರೆಯುತ್ತಿದೆ
ಕಾಲನೇಮಿ ಕಾಣಿಸನು
ತೆರೆಯ ಹಿಂದೆ ಬಂಧಿ ಅವನು "

"ಹಾದಿಯುದ್ದ ಜನ ಶವಗಳು
ಮುರಿದು ಬಿದ್ದಿವೆ ಕೈಕಾಲು
ಯಾವ ಲೋಕವೇ ತಾಯಿ ಇದು
ಹಾರುತಿವೆ ರಣ ಹದ್ದುಗಳು ?"

"ಮೃತ್ಯುವಿನ ಮೈದಾನ
ಮುಸುಕಿದೆ, ಶತ್ರು ; ಅಣ್ಣನೆ.
ತುಂಬಿವೆ ಈರ್ಷ್ಯೆ ; ದಾಹ
ದಂಡು ದಂಡು ಅಗೋ ! ಸೈನ್ಯ
ಇದು ಯುದ್ಧ ಮಗು ! ಇದು ಯುದ್ಧ
ಕುದಿಯುತಿವೆ ದ್ವೇಷಾಕ್ರೋಶ
ಮಿಕ್ಕುವುದು ಬರೀ ಭಾಷ್ಪ.
ಮಹಲು – ಕೊಳಚೆ
ಮೃಷ್ಟಾನ್ನ – ಎಂಜಲೆಲೆ "

ಅಸ್ಥಿಮೂಲ ಪಂಜರಗಳು
ಆರ್ತತೆಯ ಮಂದಿರಗಳು
ಭೂಲೋಕ ಮಗು ! ಇದು ಭೂಲೋಕ. "

ತೆಲಗು ಮೂಲ : **ದೇವರಕೊಂಡ ಬಾಲಗಂಗಾಧರ ತಿಲಕ್**
ಕನ್ನಡಕ್ಕೆ : **ಕೇಶವ್ ಮಳಗಿ**

(1ನೇ ಪುಟದಿಂದ)

ಆದರೆ ಇದೆಲ್ಲಕ್ಕಿಂತ ಘೋರವಾದದ್ದು ಈಗಾಗಲೇ ನಾನಾ ಕಾರಾಣಗಳಿಂದ ಒಡೆದು ಛಿದ್ರವಾದ ಹಳ್ಳಿಯ ಸಹಬಾಳ್ವೆಯ ಬೇರಿಗೆ ದ್ವೇಷ, ಸೇಡಿನ ಪಕ್ಷ ರಾಜಕಾರಣದ ಪಾಷಾಣ ಬೆರೆತದ್ದು. ಹಿಂಸೆಯ ಮೊಟ್ಟೆ ಇಟ್ಟದ್ದು. ಗಾಂಧೀಜಿಯ ಕನಸಿನ ಗ್ರಾಮ ಸ್ವರಾಜ್ಯಕ್ಕೆ ಗೋರಿ ತೋಡಲು ಇದು ಸಾಕು!

ಜಾತಿ ಹೆಣಿಗೆಯ ಗ್ರಾಮೀಣ ಅಧಿಕಾರದ ಬಲೆ ಈಗ ಸಂಪೂರ್ಣವಾಗಿ ಬಲಾಢ್ಯರ ಕೈಯಲ್ಲಿದೆ. ಬಲೆ ಇಲ್ಲದ ಬಹುಸಂಖ್ಯಾತ ದುರ್ಬಲರು ಈಗ ಈ ಬಲೆಯಡಿ ಸಿಕ್ಕಿ ಬೀಳಲಿರುವ ಮಿಗಗಳು ಮಾತ್ರ.

ದೇವರಾಜ ಅರಸರು ತಮ್ಮ ಆಳ್ವಿಕೆಯ ಒಂದು ದಶಕದಲ್ಲಿ ದನಿಯಿಲ್ಲದವರಿಗೆ ದನಿ ತಂದುಕೊಟ್ಟಿದ್ದರು. ಬಲಹೀನರ ತೋಳಿಗೆ ಚೂರು ಕಸುವು ತುಂಬಿದ್ದರು. ಭೀತಿ ತುಂಬಿದ್ದ ಎದೆಗಳಲ್ಲಿ ಕೊಂಚ ಧೈರ್ಯ, ಆತ್ಮವಿಶ್ವಾಸ ತುಂಬಿದ್ದರು.

ಹೆಗಡೆ ತಮ್ಮ ಕೇವಲ ನಾಲ್ಕು ವರ್ಷಗಳ ಅವಧಿಯಲ್ಲಿ ಇದೆಲ್ಲವನ್ನೂ ನುಚ್ಚುನೂರು ಮಾಡಿ ಇವರೆಲ್ಲರ ಸ್ಥಿತಿಯನ್ನು ನಾಲ್ಕು ದಶಕಗಳಷ್ಟು ಕಾಲ ಹಿಂದಕ್ಕೆ ಒಯ್ದುಬಿಟ್ಟಿದ್ದಾರೆ.

ಈಗ ಈ ಅರಿವಿನ ಬೆಳಕಲ್ಲಿ ಬೇರು ಉಳಿಸಿಕೊಳ್ಳ ಬಯಸುವ ಸಂಘಟನೆಗಳು ಕಣ್ಣಲ್ಲಿ ಕಣ್ಣಿಟ್ಟು ಈ ದುರ್ಬಲರ ಸಂಘಟನೆ ತೋಡಗಬೇಗದೆ. ●

(3ನೇ ಪುಟದಿಂದ)

ಮೇಲೂ ಹೈಕೋರ್ಟಿನಿಂದ ಸ್ಟೇ ತಂದಿರುತ್ತಾರೆ. ಭೂಮಿನ್ಯಾಯ ಮಂಡಲಿ ತೀರ್ಪಿಗೆ 70 ಎಕರೆಗೆ ಸ್ಟೇ ಮತ್ತು ಲಿಕ್ವಡೇಷರ್ಗೆ 4 ವಾರಗಳಿಗೆ–

ಕಾರ್ಖಾನೆ ಪ್ರಾರಂಭ ದೆಸೆಯಲ್ಲಿ ಇಲ್ಲಿನ ಜನರಿಗೆ ಈ ಗುಡಿಸಲು ಮನೆಕಟ್ಟಿಸಿಕೊಟ್ಟವನು ಮೊರಾರ್ಕನೇ. ಭೂಕಾಯ್ದೆಯಂತೆ ಕಾರ್ಖಾನೆಗೆ 50 ಎಕರೆ ಮಾತ್ರ ಜಮೀನು ಪಡೆಯಬಹುದು. ಉಳಿದದ್ದನ್ನು ಉಳುವ ರೈತರಿಗೆ ಸಾಗುವಳಿ ಕೊಡಿ ಎಂದು ದಲಿತ ಸಂಘರ್ಷ ಸಮಿತಿ ನೇತೃತ್ವದಲ್ಲಿ ಈ ಎಲ್ಲ ಭೂಹೀನರು ಕೇಳುತ್ತಿದ್ದಾರೆ.

ಇವರನ್ನು ಹೇಗಾದರು ಮಾಡಿ ಇಲ್ಲಿಂದ ಒಕ್ಕಲೆಬ್ಬಿಸಬೇಕೆಂದು 14 ರಂದು ಮನೆಗಳನ್ನು ಖಾಲಿಮಾಡಲು ಬೆದರಿಸಿ ಹೇಳಿದ್ದರು. ಹತ್ತಾರು ವರ್ಷಗಳಿಂದ ಹೊಲ ಮತ್ತು ಮನೆಗಳಿಗೆ ಬೇಡಿಕೆ ಸಲ್ಲಿಸಿದ್ದ ಬಡಜನರು ಸರ್ಕಾರದ ಜಮೀನಿನ ತಾವಿರುವುದಾಗಿ ತಿಳಿಸಿ ಏಕಾಏಕಿ ಖಾಲಿಮಾಡಲಿಲ್ಲ ಮಾರನೇ ದಿನವೆ ನಿಯೋಜಿತ ಈ ದುರ್ಘಟನೆ ನಡೆದೇ ಹೋಯಿತು.

ದ. ಸಂ. ಸ. ದ ಮಾರ್ಕಂಡೆಪ್ಪ, ಭರಮಪ್ಪ ಬೆಲ್ಲದ, ಜನಾರ್ಧನ ಕಮ್ಯುನಿಸ್ಟ ಕಾರ್ಯಕರ್ತ ಭಾಗ್ಯವಂತ ಇವರನ್ನು ಗಲಾಟೆಯಲ್ಲಿ ಮುಗಿಸಿ ಬಿಡಬೇಕೆಂಬ ಯೋಜನೆ ಇತ್ತೆಂದು ತಿಳಿದು ಬಂದಿದೆ. ನನ್ನನ್ನೂ ಅಟ್ಟಿಸಿಕೆಂಡು ಬಂದು ಹಲ್ಲೆನಡೆಸುವಾಗ್ಗ ಜನರೇ ರಕ್ಷಿಸಿದರು. ಉಳಿದವರು ಅಕಸ್ಮಾತ್ ಆವೇಳೆ ಅಲ್ಲಿರದಿದ್ದರಿಂದ ಬಚಾವಾಗಿರುತ್ತಾರೆ.

ಮಾಲೀಕನೊಳಗೊಂಡಂತೆ 23 ಜನರನ್ನು ಅರೆಸ್ಟ್ ಮಾಡಿ ಕ್ರಮ ಕೈಗೊಳ್ಳಲಾಗಿದೆ. ಆದರೂ ಇವರು ಕಾನೂನಿನ ಹಿಡಿತದಿಂದ ಪಾರಾಗದಿರಲಾರರೆಂದು ಶಂಕೆ ಇದೆ. ಸುಟ್ಟ ನಂತರ ಪರಿಹಾರ ಮುಂತಾದ ಗಾಣಗಿತ್ತಿಯ ಅನುಕಂಪಗಳು ಅಧಿಕಾರಿಗಳ ಮಟ್ಟದಲ್ಲಿ ನಡೆದೇ ಇವೆ.

ಈ ಸಮಸ್ಯೆಗಳನ್ನು ಬಗೆಹರಿಸುವತ್ತ ದಿಟ್ಟ ಹೆಜ್ಜೆಗಳನ್ನಿಡುತ್ತಿರುವ ಅಸಿಸ್ಟೆಂಟ್ ಕಮಿಷನರ್ ಟಿ. ಎಂ. ವಿಜಯಭಾಸ್ಕರ್‌ರವರ ಕ್ರಮಗಳನ್ನು ಬೆಂಬಲಿಸಿ ಸರ್ಕಾರ ಅವರ ಕೈ ಬಲಪಡಿಸಬೇಕಾಗಿದೆ. ಮತ್ತೆ ವರ್ಷಾರಂಭದಲ್ಲೇ ದಿಕ್ಕೆಟ್ಟು ಕಂಗಾಲಾದ ಈ ಜನರಿಗೆ ಅಲ್ಲೇ ವಸತಿ ಕಲ್ಪಿಸಿ ವಸತಿ ವರ್ಷದ ಈ ಕಾರ್ಯ ಪ್ರಾರಂಭಿಸಬೇಕಿದೆ. ಮತ್ತು ಉಳುವವರಿಗೇ ಭೂಮಿ ಕೊಡಬೇಕಿದೆ. ಇಲ್ಲವಾದಲ್ಲಿ ಸಮೆಸ್ಯೆ ಇನ್ನೂ ಜಟಿಲವಾಗಿ ಗೂಂಡಾಗಿರಿ ಮುಂದುವರಿಯುವ ಸೂಚನೆಗಳಿರುವುದಾಗಿ ತಿಳಿದಿದೆ. ●

ನಿಮ್ಮ ಮಗುವನ್ನು ರೋಗಗಳಿಂದ ರಕ್ಷಿಸಿ

oo—oo

ಹುಟ್ಟಿದ ದಿನದಿಂದಲೇ ನಿಮ್ಮ ಮಗುವು ಅನೇಕ ಆರೋಗ್ಯದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಲ್ಲದೆ, ಮಗುವು ಹಲವಾರು ಸಾಂಕ್ರಾಮಿಕ ರೋಗಗಳಿಗೆ ತುತ್ತಾಗುವ ಸಾಧ್ಯತೆಯಿರುತ್ತದೆ. ಮಗುವಿನಲ್ಲಿ ರೋಗ ನಿರೋಧಕ ಶಕ್ತಿ ಸ್ವಾಭಾವಿಕವಾಗಿ ಕಡಿಮೆ ಇರುತ್ತದೆ.

ಎಂತಲೇ ನಿಮ್ಮ ಮಗುವನ್ನು ರೋಗಗಳಿಗೆ ತುತ್ತಾಗದಂತೆ ಕಾಪಾಡುವುದು ಅತ್ಯಂತ ಆವಶ್ಯಕ. ನಿಮ್ಮ ಮಗುವಿಗೆ ರೋಗ ನಿರೋಧಕ ಚುಚ್ಚುಮದ್ದುಗಳನ್ನು ಕೊಡಿಸಿ.

ಕ್ಷಯ, ಗಂಟಲು ಬೇನೆ, ನಾಯಿ ಕೆಮ್ಮು, ಹಾಗೂ ಮಿಾಸಲ್ಸ್ (ಗೊಬ್ಬರ) ಈ ರೋಗಗಳನ್ನು ತಡೆಗಟ್ಟಲು ನಿಮ್ಮ ಮಗುವಿಗೆ ಒಂದು ವರ್ಷದೊಳಗೆ ಚುಚ್ಚುಮದ್ದುಗಳನ್ನು ಹಾಕಿಸಿ, ಹಾಗೂ ಪೋಲಿಯೋ ತಡೆಯಲು 'ತೊಟ್ಟು' ಔಷಧಿಯನ್ನು ಕೊಡಿಸಿ.

ಮಗುವಿನ ವಯಸ್ಸು		ಕೊಡಬೇಕಾದ ಲಸಿಕೆ	ಪ್ರಮಾಣ
3 ರಿಂದ 9 ತಿಂಗಳು	ಅ)	ತ್ರಿರೋಗ – ಅಂದರೆ ಧನುರ್ವಾಯು, ನಾಯಿ ಕೆಮ್ಮು, ಗಂಟಲುಬೇನೆಗಳ ವಿರುದ್ಧ	3 ಬಾರಿ 1 ರಿಂದ 2 ತಿಂಗಳ ಅಂತರದಲ್ಲಿ.
	ಆ)	ಪೋಲಿಯೋ (ಅಂಗ ವಿಕಲತೆ)	3 ಬಾರಿ 1 ರಿಂದ 2 ತಿಂಗಳ ಅಂತರದಲ್ಲಿ.
	ಇ)	ಕ್ಷಯರೋಗದ ವಿರುದ್ಧ – ಬಿಸಿಜಿ	ಒಂದು ಬಾರಿ
9 ರಿಂದ 12 ತಿಂಗಳು		ಮಿಾಸಲ್ಸ್	ಒಂದು ಬಾರಿ

ಹೆಚ್ಚಿನ ವಿವರಗಳಿಗೆ :

ನಿರ್ದೇಶಕರು,
ಸಮಾಜ ಕಲ್ಯಾಣ ಇಲಾಖೆ,
ಕರ್ನಾಟಕ ಸರ್ಕಾರ,
ಬೆಂಗಳೂರು.
– ಇವರನ್ನು ಸಂಪರ್ಕಿಸಿ.

● ಕರ್ನಾಟಕ ವಾರ್ತೆ

(1ನೇ ಪುಟದಿಂದ)

ಕೇಂದ್ರ ಸರ್ಕಾರವು ಕಳೆದ ಡಿಸೆಂಬರ್ 7 ರಂದು ರಾಜ್ಯ ಸಭೆಯಲ್ಲಿ ಮಂಡಿಸಿದ ಅಧಿಕೃತ ಅಂಕಿ ಅಂಶಗಳ ಪ್ರಕಾರ ಕಳೆದ ನಾಲ್ಕು ವರ್ಷಗಳಲ್ಲಿ ದೇಶದ ವಿವಿಧ ಭಾಗಗಳಲ್ಲಿ 32 ಸಾವಿರ ದಲಿತರ ಕೊಲೆ, 44 ಸಾವಿರ ದಲಿತವರ್ಗದ ಮಹಿಳೆಯರು ಅತ್ಯಾಚಾರಕ್ಕೆ ಒಳಗಾಗಿದ್ದಾರೆ.

ಸವರ್ಣೀಯ ಜಾತ್ಯಾಂಧರು, ಭೂಮಾಲೀಕರು ನಡೆಸಿದ ಈ ಅತ್ಯಾಚಾರದ ಅವಮಾನ ಸಹಿಸಲಾರದೆ ಅನೇಕ ಅಮಾಯಕ ಬಡ ಹೆಣ್ಣುಮಕ್ಕಳು ಸಾವನ್ನಪ್ಪಿದ್ದಾರೆ. ಇವರಲ್ಲಿ ಕೆಲವರು ಬಾವಿಗೆ, ಹರಿಯುವ ಕಾಲುವೆಗೆ, ಕೆರೆಗೆ ಬಿದ್ದು ಪ್ರಾಣ ಕಳೆದುಕೊಂಡರೆ ಮತ್ತೆ ಕೆಲವರು ಮರಗಿಡಗಳಿಗೆ ಮತ್ತು ಮನೆಯ ಸೂರುಗಳಿಗೆ ಹಗ್ಗಕಟ್ಟಿ ನೇಣು ಹಾಕಿಕೊಂಡು ಈ ಕ್ರೂರ ಜಗತ್ತಿನಿಂದ ಕಣ್ಮರೆಯಾದ ಘಟನೆಗಳು ವರದಿಯಾಗಿವೆ.

ನಡುಕ ಹುಟ್ಟಿಸುವ ಈ ಭೀಕರ ಸಂಖ್ಯೆಯ ಕೊಲೆ, ಅತ್ಯಾಚಾರಗಳಲ್ಲದೆ ಈ ಅವಧಿಯಲ್ಲಿ 6481 ಪರಿಶಿಷ್ಟ ಜಾತಿಯ ಮತ್ತು 1538 ಪರಿಶಿಷ್ಟ ಬುಡಕಟ್ಟಿನ ಜನರು ಹಲವಾರು ಹಲ್ಲೆ, ದೌರ್ಜನ್ಯಗಳಿಗೆ ಸಿಕ್ಕಿ ತೀವ್ರವಾಗಿ ಗಾಯಗೊಂಡು ಕೈಕಾಲು ಕಳೆದುಕೊಂಡು ಊನರಾಗಿದ್ದಾರೆ.

ಇದಲ್ಲದೆ ಪರಿಶಿಷ್ಟ ಜಾತಿಯ ಬಡವರ ಗುಡಿಸಲುಗಳಿಗೆ ಬೆಂಕಿ ಹಚ್ಚಿದ 4625 ಪ್ರಕರಣಗಳು ದಾಖಲಾಗಿವೆ. ಇಂತಹದೇ ಪರಿಶಿಷ್ಟ ಬುಡಕಟ್ಟಿನ ಮೇಲೆ 915 ಬೆಂಕಿ ಹಚ್ಚುವ ಪ್ರಕರಣಗಳು ನಡೆದಿವೆ. ಈ ಎರಡು ವರ್ಗಗಳ ವಿರುದ್ಧ ಸವರ್ಣೀಯರು ನಡೆಸಿದ ದೌರ್ಜನ್ಯ ದಬ್ಬಾಳಿಕೆಯಂತಹ ಘಟನೆಗಳು 62.917. (ಪ.ಜಾ. 47.685 ಪ.ವ. 15.232)

ನಾಲ್ಕುವರೆ ವರ್ಷದ ಈ ದುರಂತದ ಚಿತ್ರಣ ಇದಾದರೆ 1986 ರಾಷ್ಟ್ರ ರಾಜಕಾರಣದಲ್ಲಿ ನಾಯಕನನ್ನು ಕಳೆದುಕೊಂಡ ವರ್ಷ. ದಲಿತರಿಗೆ ಮಾನಸಿಕವಾಗಿ ನೆಮ್ಮದಿಯನ್ನು ತಂದುಕೊಡುತ್ತಿದ್ದ ರಾಜಕೀಯ ನಾಯಕ ಜಗಜೀವನರಾಂ ಅವರ ಸಾವು. ಡಾ॥ ಬಾಬು ಸಾಹೇಬ ಅಂಬೇಡ್ಕರ್ ಅವರಂತೆ ಅಸಾಮಾನ್ಯ ಬುದ್ಧಿವಂತ, ಕೆಚ್ಚಿದೆಯ ಹೋರಾಟದ ವ್ಯಕ್ತಿತ್ವ ಇಲ್ಲದಿದ್ದರೂ ನಾಲ್ಕು ದಶಕಗಳ ಇಂಡಿಯಾದ ರಾಜಕೀಯ ಚದುರಂಗದ ಆಟದಲ್ಲಿ ಅಪ್ರತಿಮ ಚಾಕಚಕ್ಯತೆ ತೋರಿದ ಚಾಣಾಕ್ಷ ರಾಜಕಾರಣಿ ರಾಂ ಆಗಿದ್ದರು.

ರಾಜ್ಯದ ಧಾರವಾಡ, ಬೆಳಗಾಂ ಒಳಗೊಂಡಂತೆ ಉತ್ತರ ಜಿಲ್ಲೆಗಳ ವ್ಯಾಪ್ತಿಯಲ್ಲಿ ದೇವದಾಸಿ ಪದ್ಧತಿ ಅನೂಚಾನವಾಗಿ ನಡೆದುಕೊಂಡು ಬಂದರೆ ಇದಕ್ಕೆ ಹೊಂದಿಕೊಂಡಂತೆ ಶಿವಮೊಗ್ಗ ಜಿಲ್ಲೆ ಚಂದ್ರಗುತ್ತಿಯಲ್ಲಿ ನಡೆವ ಬೆತ್ತಲೆಸೇವೆ ಮಾನವ ಹೃದಯಗಳ ಕಲಕದೆ ಇರದು. ಮಾರ್ಚಿ ಮೊದಲ ವಾರದಲ್ಲಿ ಇಂತಹ ಕ್ರೂರ ಪದ್ಧತಿಯನ್ನು ತೊಡೆದು ಹಾಕಲು ದಲಿತ ಸಂಘರ್ಷ ಸಮಿತಿ ಹಾಗೂ ಇತರ ಪ್ರಗತಿಪರ ಸಂಘಟನೆಗಳು ಶ್ರಮಿಸಿದವು. ಪೊಲೀಸರಾದಿಯಾಗಿ ಮಹಿಳಾ ಪೊಲೀಸರೂ ಸೇರಿದಂತೆ ಇವರೂ ಬೆತ್ತಲೆಗೊಂಡು ಸಾಂಪ್ರದಾಯ ವಾದಿಗಳ, ಜಾತಿವಾದಿಗಳ ಹಿಂಸೆ ತಾಂಡವವಾಡಿದ್ದು ಚರಿತ್ರೆಯ ಪುಟ ಸೇರಿದೆ.

ಈ ದೌರ್ಜನ್ಯಗಳ ರಾಜ್ಯವಾರು ವಿಂಗಡಣೆ

ರಾಜ್ಯಗಳು	ಕೊಲೆ	ಅತ್ಯಾಚಾರ	ಬೆಂಕಿ ಹಚ್ಚಿದ ಪ್ರಕರಣ
ಉತ್ತರ ಪ್ರದೇಶ	1652	1813	2641
ಮಧ್ಯಪ್ರದೇಶ	972	1661	1639
ಬಿಹಾರ	341	451	1023
ರಾಜಸ್ಥಾನ	219	453	420
ಮಹಾರಾಷ್ಟ್ರ	107	262	158
ಗುಜರಾತ್	121	73	133
ಆಂಧ್ರಪ್ರದೇಶ	72	147	38
ಕರ್ನಾಟಕ	78	43	130
ಒರಿಸ್ಸಾ	39	97	62
ಹರಿಯಾಣ	20	142	22
ತಮಿಳುನಾಡು	58	57	42
ಕೇರಳ	[illegible]	99	40
ಪಂಜಾಬ್	41	39	4
ಪಶ್ಚಿಮ ಬಂಗಾಳ	19	40	10
ಹಿಮಾಚಲಪ್ರದೇಶ	5	15	13
ಜಮ್ಮು ಮತ್ತು ಕಾಶ್ಮೀರ	4	9	1
ಮಣಿಪುರ	2	1	–
ಅಸ್ಸಾಂ	–	2	1
ತ್ರಿಪುರ	–	1	–
ಅರುಣಾಚಲ ಪ್ರದೇಶ	4	–	–
ಮಿಜೋರಾಂ	2	–	–

ಎಲ್ಲ ಬಗೆಯ ಆರ್ಥಿಕ, ಧಾರ್ಮಿಕ, ಸಾಮಾಜಿಕ, ಬೌದ್ಧಿಕ ದಬ್ಬಾಳಿಕೆಯ ವಿರುದ್ಧ ದಲಿತರಲ್ಲಿ ಪ್ರಜ್ಞೆ ಮೂಡಿಸಲು ಯತ್ನಿಸುತ್ತಿರುವ ಪಂಚಮಕ್ಕೆ ಚಂದಾದಾರರಾಗಿರಿ.

ಲೇಖನ, ಸುದ್ದಿ ಕಳಿಸುವ ಮೂಲಕ ನೋವುಳ್ಳವರ ನುಡಿಯಾಗಿರುವ ಪಂಚಮವನ್ನು ನಿಮ್ಮದಾಗಿಸಿಕೊಳ್ಳಿ.

ಸಂಪಾದಕ/ಪ್ರಕಾಶಕ/ಮುದ್ರಕ: ರಂಗಸ್ವಾಮಿ ಬೆಲ್ಲದಮಡು, 2ಬಿ, ಮಹದೇಶ್ವರ ನಿಲಯ, 2ನೇ ಕ್ರಾಸ್, 2ನೇ ಮೈನ್, ಎ.ಕೆ. ಕಾಲನಿ, ಹೊಸಹಳ್ಳಿ, ಬೆಂಗಳೂರು-40
ಮುದ್ರಣ: ವೃಷ್ಟಿ ಪ್ರಕಾಶನ ಲಿಮಿಟೆಡ್, ವಿಜಯನಗರ, ಬೆಂಗಳೂರು-40